Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಏಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದ್ದು)

ಸಂಪುಟ 30 ಸಂಚಿಕೆ 15 | ಮಂಗಳವಾರ 17—9—46 | ಬಿಡಿ ಪ್ರತಿ 3 ಪೈ

ಭಾರತದಲ್ಲಿ ಯಾದವೀ ಕಲಹ ಸ್ನಿಹತವಾಗುತ್ತಿದೆ

ಗಾಂಧೀಜಿ ಖಂಡನೆ

ನವದೆಹಲಿ ಸೆ. 16 — ಶನಿವಾರ ಬೊಂಬಾಯಿನಲ್ಲಿ ಟ್ಯಾಕ್ಸಿಯಿಂದ ಗುಂಡು ಹಾರಿದ ಪ್ರಸಂಗವನ್ನು ಗಾಂಧೀಜಿ ಖಂಡಿಸಿದ್ದಾರೆ.

ಒಪ್ಪಂದ

ಪೇರಿಸ್ ಸೆ. 16 — ಫ್ರಾನ್ಸ್ ಮತ್ತು ಇಂಡೋ ಚೀನಗಳಿಗೆ ಸಂಧಿಯಾಯಿತು.

ಅಹಮದಾಬಾದಿನಲ್ಲಿ ಕರ್ಫ್ಯೂ

ಅಹಮದಾಬಾದ್ ಸೆ. 15 — ಇರಿತಗಳು ನಿಂತಿಲ್ಲ. ನಾಡು ಬಾಂಬುಗಳ ಆಸ್ಫೋಟನೆ ನಡೆಯುತ್ತಿದೆ. ಸಂಚಾರಿಗಳ ಮೇಲೆ ಆಸಿಡ್ ಸುರಿಯುವ ಪ್ರಸಂಗಗಳು ನಡೆಯುತ್ತಿವೆ. ಇರಿತದಿಂದ ಮೂರು ಮರಣಗಳಾಗಿವೆ. ಇವುಗಳು ನಡೆಯುತ್ತಿರುವ ಸ್ಥಳದಲ್ಲಿ ಸಂಪೂರ್ಣ ಕರ್ಫ್ಯೂ ಆಜ್ಞೆಯಾಗಿದೆ.

ಭಿಕ್ಷುಕ ನಿರೋಧಕ್ಕಾಗಿ

ಭಿಕ್ಷಾಟನೆಯನ್ನು ಉಚ್ಚಾಟನೆ ಗೊಳಿಸಲು ಬೇಕಾಗಿ ಅಫ್ಘಾನ್ ಸರಕಾರವು ತನ್ನ ರಾಜ್ಯದೊಳಗಿರುವ ಎಲ್ಲಾ ಭಿಕ್ಷುಕರನ್ನು ಕಾರ್ಖಾನೆಗಳಲ್ಲಿ ಕೂಲಿ ಕೆಲಸಕ್ಕೆ ಸೇವಿಸುವ ಯೋಜನೆ ಕಲ್ಪಿಸಿರುವುದು.

ಬೊಂಬಾಯಿ ಪರಿಸ್ಥಿತಿ ಉತ್ತಮಗೊಂಡಿಲ್ಲ

ಬೊಂಬಾಯಿ ಸೆ 16 — ಬೊಂಬಾಯಿ ಇನ್ನೂ ಉತ್ತಮ ಪರಿಸ್ಥಿತಿಯನ್ನು ಕಂಡಿಲ್ಲ. ಆರು ಮಂದಿ ಈ ದಿವಸ ಇರಿಯಲ್ಪಟ್ಟು ಒಬ್ಬ ಸತ್ತನು.

ಬ್ರಿಟನ್ನಿನ ಯುದ್ಧ ಸಿದ್ಧತೆ

ಬ್ರಿಟನ್ನು ಪುಧ್ಯ ಪ್ರಾಚ್ಯದಲ್ಲಿ ಬಲವಾದ ಯುದ್ಧ ಸಿದ್ಧತೆ ಮಾಡುತ್ತಿದೆಯೆಂದೂ ಪ್ಯಾಲಸ್ತೀನನ್ನು ಮಿಲಟರಿ ನೆಲೆಯಾಗಿ ಪರಿವರ್ತಿಸುತ್ತಿದೆಯೆಂದೂ ರಷ್ಯದ ಮಿಲಿಟರಿ ಪತ್ರಿಕೆಯೊಂದರ ಸುದ್ದಿ.

ರೇಷ್ಮೆ ಸೆನ್ಸಸ್

ಬೆಂಗಳೂರು ಸೆ 16 — ನಿನ್ನೆಯ ದಿವಸ ಬೆಂಗಳೂರಿನಲ್ಲಿ ರೇಷ್ಮೆ ಸೆನ್ಸಸ್ ಸುಗಮವಾಗಿ ನಡೆಯಿತು.

ಇಂದಿನ ಜಪಾನ್

ಟೋಕಿಯೋ ಸೆ 16 — ಐವತ್ತು ಲಕ್ಷ ಮಂದಿ ನಿರುದ್ಯೋಗಿಗಳಾಗಿರುವರು. 4200000 ಯುದ್ಧ ಕ್ಷೇತ್ರದಿಂದ ವಾಪಸಾಗಿರುವರು.

ಹೊಟೇಲನ್ನೇ ಕೊಂಡುಕೊಂಡ

ಒಬ್ಬ ಪ್ರಯಾಣಿಕನು ಟೆಕ್ಸಾಸ ಪ್ರಾಂತ್ಯದ ಕೊರ್ಪಸ್ ಕ್ರಿಸ್ಟಿ ಎಂಬಲ್ಲಿ ಒಂದು ಹೊಟೇಲಿನಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಕೇಳಿದ್ದ. ಅದು ಖಾಲಿ ಬೀಳುವ ಸಂಭವವಿಲ್ಲ ಎಂದು ಅವನಿಗೆ ಉತ್ತರ ಬಂತು. ಕೂಡಲೇ ಇಡಿ ಹೊಟೇಲನ್ನೇ ಕೊಂಡುಕೊಂಡನಂತೆ!

ಬಂಧನ

ಬಂಗಾಲ ಪ್ರಾಂತಿಕ ಹಿಂದು ಮಹಾಸಭಾದ ಸೆಕ್ರೆಟರಿಗಳಾದ ಏ ಮುಖಾನಲಾಲ ಬಿಸ್ವಾಸ ಇವರು ಬಂಧಿಸಲ್ಪಟ್ಟಿದ್ದು ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವರನ್ನು ಜಾಮೀನಿನ ಮೇಲೆ ಬಿಡಲು ನಿರಾಕರಿಸಿದರಂತೆ.

ಮ್ಯುನಿಸಿಪಾಲಿಟಿ ರದ್ದು

ಕಟಕ ಮುನಿಸಿಪಾಲಿಟಿಯು ಅಡಳಿತೆಯು ಅಸಮಾಧಾನಕರ, ಅಸಂತೋಷಕಾರಕ ಹಾಗು ಬೇಜವಾಬ್ದಾರವಾದರಿಂದ ಓರಿಸಾ ಸರಕಾರದವರು ಅದನ್ನು ಏಪ್ರಿಲ್ 1950 ರ ವರೆಗೆ ರದ್ದುಗೊಳಿಸಿದ್ದಾರೆಂದು ತಿಳಿಯುತ್ತದೆ.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಶುಕ್ರವಾರ ದಿನ ಕಾಂಗ್ರೆಸ್ ಕಚೇರಿಯಲ್ಲಿ ಮೇಲ್ಕಂಡ ಸಂಘದ ಕೆಲಸಗಾರರು ಶ್ರೀ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಶ್ರೀಗಳಾದ ಟಿ. ಮರಿಯಪ್ಪ ಮಳವಳ್ಳಿ ವೀರಪ್ಪ ಟಿ. ಎಸ್ ಸುಬ್ಬಣ್ಣ ಮತ್ತು ಅಖಿಲ ಮೈಸೂರು ರೈಲ್ವೆ ಕೆಲಸಗಾರರ ಅಧ್ಯಕ್ಷರಾದ ಶ್ರೀ ರಜಾದ್ ಆಲಿಯವರು ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡಿದರು. ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

7000 ಟನ್ ಅಕ್ಕಿ ಮೈಸೂರಿಗೆ ಬರುವುದಿಲ್ಲ

ಮೈಸೂರಿನ ಅಕ್ಕಿ ಪರಿಸ್ಥಿತಿ ತೃಪ್ತಿಕರವಾಗಿರುವುದೇ!

ಮದ್ರಾಸ್ ಸೆ 16 — ಮೈಸೂರಿನಲ್ಲಿ ಅಕ್ಕಿ ಪರಿಸ್ಥಿತಿ ತೃಪ್ತಿಕರವಾಗಿರುವುದೆಂದು ನಂಬಲಾಗಿದೆ. ಮೈಸೂರು ಸಂಸ್ಥಾನಕ್ಕೆ ಕೊಟ್ಟಿದ್ದ 7000 ಟನ್ ಅಕ್ಕಿಯನ್ನು ಮದ್ರಾಸ್ ಮತ್ತು ಟ್ರಾವಂಕೂರಿಗೆ ಹಂಚಿ ಕೊಡಲಾಗುವುದು. 7000 ಟನ್ ಅಕ್ಕಿಯನ್ನು ಅಸ್ಸಾಂನಿಂದ ಕಡಿತ ಮಾಡಿಕೊಳ್ಳಿ ಎಂದು ಮದ್ರಾಸ್ ಪ್ರಭುತ್ವಕ್ಕೆ ಕರೆಬಂದಿದೆ. ಅಕ್ಕಿ ಬಂದನಂತರ ಟ್ರಾವಂಕೂರಿಗೂ ಕೊಡಲಾಗುವುದು.

ದೆಹಲಿಯಲ್ಲಿ ಟ್ರೇಡ್ ಪಾಲಿಸಿ ಸಮಿತಿ

ಬೆಂಗಳೂರು ಸೆ. 16 — ದೆಹಲಿಯಲ್ಲಿ ಟ್ರೇಡ್ ಪಾಲಿಸಿ ಸಮಿತಿ ಸೇರುವುದು. ನಮ್ಮ ದಿವಾನರು ಆದರಲ್ಲಿ ಭಾಗವಹಿಸಲು ಮೊನ್ನೆ ಸಂಜೆ ತೆರಳಿದರು.

ಸಿಟಿ ಕೋ ಆಪರೇಟಿವ್ ಬ್ಯಾಂಕು

ಮೈಸೂರು ಸೆ. 16 — ನಿನ್ನೆ ದಿವಸ ನಡೆದ ಚುನಾವಣೆಯಲ್ಲಿ ಈ ಕೆಳಗೆ ಕಂಡವರು ಡೈರೆಕ್ಟರಾಗಿ ಚುನಾಯಿಸಲ್ಪಟ್ಟರು.

ಮಾ|| ಗಳಾದ ಸಿ, ನರಸಿಂಹಯ್ಯ, ಬಿ ವಿ. ನಂಜುಂಡಯ್ಯ, ಕೆ, ನಂದಿಬಸಪ್ಪ, ಟಿ. ಗುಂಡಪ್ಪ, ಎ. ವಿ. ರಂಗರಾವ್ ಡಿ. ಬಿ. ಕೃಷ್ಣಪ್ಪ, ಜಿ ಜನಾರ್ಧನನಾಯ್ಡು ಡಬ್ಲ್ಯು. ಎಚ್. ಥಿಯೋಬಾಲ್ಡ್, ಚೌಡಯ್ಯ, ಎಚ್. ಅಬ್ದುಲ್‌ಗಫಾರ್, ಟಿ. ಚಂದ್ರಶೇಖರಗೌಡ, ಎಚ್. ಕೃಷ್ಣಮೂರ್ತಿರಾವ್, ಎಚ್ ರಾಮಣ್ಣ, ನಂಜನಗೂಡು ಶ್ರೀಕಂಠಶಾಸ್ತ್ರಿ, ಶ್ರೀಮತಿ ಪಿ ಎಸ್. ವೆಂಕಮ್ಮ.

ಗಲಭೆಗಳಿಗೆ ಕಮ್ಯೂನಿಸ್ಟರೇ ಕಾರಣ

ಮುಸಲೀಪಟ್ಟಂ ಸೆ 16 — ಭಾರತದಲ್ಲಿ ಹಲವೆಡೆ ಉಂಟಾಗಿರುವ ಗಲಭೆಗಳಿಗೆ ಕಮ್ಯೂನಿಸ್ಟರೇ ಕಾರಣವೆಂದು ಕಳೆದ ಶನಿವಾರ ಅಲ್ಲಿ ಸೇರಿದ್ದ ಸಭೆಯಲ್ಲಿ ಭಾಷಣ ಮಾಡಿದರು.

ಗಾಂಧೀಜಿ ಹೇಳಿಕೆ

ಅಲಹಾಬಾದ್ ಸೆ 15 — ಈ ದಿವಸದ ಹರಿಜನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಭಾರತದಲ್ಲಿ ಯಾದವೀ ಕಲಹವು ನಿನ್ನಿ ಹಿತವಾಗುತ್ತಿದೆ. ಬ್ರಿಟಿಷರು ತಿಳಿವಳಿಕೆಯುಳ್ಳವರಾದರೆ ಆದರಿಂದ ಬೇರ್ಪಡುವರು. ಎಂದು ಬರೆದಿರುವರು.

ಕಲ್ಕತ್ತಾದಲ್ಲಿ ಅಕ್ಕಿ ಲೂಟಿ

ಕಲ್ಕತ್ತಾ ಸೆ 16 — ಗುಡ್ಸ್ ರೈಲು ಶಸ್ತ್ರಪಾಣಿ ದೊಂಬಿಗಾರರಿಂದ ಲೂಟಿ ಮಾಡಲ್ಪಟ್ಟಿತೆಂದು ವರದಿ

ಮಾರ್ಟಿನ್ ಬೋರ್ಮನ್ ಬದುಕಿರುವರೇ!

ಲಂಡನ್ ಸೆ. 15 — ಕಳೆದ ರಾತ್ರಿಯ ವಾರ್ತಾ ರೇಡಿಯೋ ವರದಿ ಪ್ರಕಾರ ಮೃತನಾಗಿದ್ದನೆಂದು ನಂಬಿಯಾಗಿದ್ದ ಹಿಟ್ಲರ್‌ನ ಮುಂಚಿನ ಡೆಪ್ಯೂಟಿಯಾಗಿದ್ದ ಮಾರ್ಟಿನ್ ಬೋರ್ಮನ್ನು ಜರ್ಮನ್ ಪ್ರಜೆಗಳನ್ನು ಕುರಿತು ರಹಸ್ಯ ರೇಡಿಯೋದಲ್ಲಿ ಮೂರು ಸಾರಿ ಭಾಷಣ ಮಾಡಿದನಂತೆ!

ನವದೆಹಲಿ, ಸೆ 16 — ರಜನಾತ್ಮಕ ಸಭೆ ಡಿಸೆಂಬರ್ ಮಾಹೆ ತಾ || 9 ಕ್ಕೆ ಸೇರುವುದು.

ಅಹಮದಾಬಾದ್ ಸೆ 16 — ಪೋಲೀಸ್ ಇತ್ಯಾದಿ ಸಹಾಯ ಪಡೆಯುವುದಕ್ಕಿಂತ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಗಾಂಧೀಜಿ ಪ್ರಶ್ನೆಯೊಂದಕ್ಕೆ ಹರಿಜನದಲ್ಲಿ ಉತ್ತರವಿತ್ತಿದ್ದಾರೆ.

ಪ್ರಸಿದ್ಧ ಗೂರಲು ಔಷಧಿ

ಲೋಕ ಪ್ರಸಿದ್ಧವಾದ " ಲಕ್ಷ್ಮಣ ಭೂತಿ " ಯನ್ನು 10—10—46 ನೇ ಪೋರ್ಣಮಿ ದಿವಸ ಸೇವಿಸುವುದರಿಂದ ಗೂರಲು ರೋಗವು ಪೂರ್ಣವಾಗಿ ವಾಸಿಯಾಗುವುದು.

ಹರಪಾಲು ಪುರದ ಮ್ಯಾಜಿಸ್ಟ್ರೇಟರು ' ಈ ಖಾಯಿಲೆ ನಿವಾರಣೆಗೆ ಈ ಔಷಧವು ಎಲ್ಲಾ ಕಡೆಯಲ್ಲೂ ಪ್ರಖ್ಯಾತಿ ಹೊಂದಿದೆ ' ಎಂದು ಬರೆದಿದ್ದಾರೆ.

Sebak,
Sri Janaki Sewashram
P. O. Chitrakot (U. P.)

ಜಗದ್ಗುರುಗಳ ಸಂದೇಶ

ಅಖಿಲ ಭಾರತ ವರ್ಷಿಯ ಧರ್ಮ ಸಂಘದ ಅಧ್ಯಕ್ಷರಾದ ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರು ತಾ|| 27-8-46 ರಲ್ಲಿ ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳ ಮೂಲಕ ದಯಪಾಲಿಸಿದ ಸಂದೇಶ —

ದೇಶದಲ್ಲೀಗ ಎಲ್ಲೆಲ್ಲಿಯೂ ನಾಸ್ತಿಕತೆಯೂ, ಅಧರ್ಮಿಕತೆಯೂ ಹೆಚ್ಚಿದೆ. ಆದ್ದರಿಂದಲೇ ಎಲ್ಲಾ ಕಡೆಯಲ್ಲಿಯೂ ಅಶಾಂತಿಯೂ ದಂಗೆಯೂ ಅನೇಕ ತಂಹದ ಉಪದ್ರವಗಳೂ ಸಡೆಯುತ್ತಿವೆ.

ಕಲಕತ್ತಾಬಾದಿನಲ್ಲಿ ದಂಗೆಯು ನುಗಿಯುವುದಕ್ಕೂ ಮುಂಗಾಗಿಯೇ ಕಲ್ಕತ್ತೆಯಲ್ಲಿ ಹಿಂದೆಂದೂ ಹಿಂದು ಸ್ಥಾನದಲ್ಲಾಗದಿದ್ದಂತಹ ಅನಾನುಷ ಪಾಶವಿಕ ಅತ್ಯಾಚಾರವೂ ದಂಗೆಯೂ ಆಯಿತು. ಕೋಮುವಾರ ಭಾವನೆಯು ಸರಕಾರವೇ ಆದಕ್ಕೆ ಕಾರಣ. ಪಕ್ಷಪಾತ ರಹಿತವಾದ ಕಮಿಶೀಷನ್ನು ಕೂಡ್ಲೆ ನ್ಯಾಯವಿಚಾರವಾಗಿ ನಿಷ್ಪಕ್ಷಪಾತೆ ನಡೆಸಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಕೊಡಬೇಕು.

ಅಲಹಾಬಾದ್ ಢಾಕಾ ಪಾಟ್ನಾ ಮುಂತಾದಲ್ಲಿಯೂ ಅಶಾಂತಿಯಿದೆ. ಎಲ್ಲಾ ಕಡೆಯಲ್ಲಿಯೂ ಹಿಂದುಗಳಿಗೇ ಹಾನಿಯಾದುದು ಕಂಡು ಬರುತ್ತದೆ. ಸಧ್ಯದಲ್ಲೇ ಇನ್ನೂ ಅನೇಕ ಕಡೆ ಅಶಾಂತಿಯಾಗುವ ಚಿಹ್ನೆ ಇದೆ. ಇಂತಹ ಸಮಯದಲ್ಲಿ ಹಿಂದೂಗಳು ಸಂಘಟಿತರಾಗಿ ಆತ್ಮರಕ್ಷಣೆಗೆ ಯತ್ನಿಸಬೇಕು.

ಇತಿಹಾಸದಲ್ಲಿ ನೋಡಿದರೆ ಇತರರಿಂದ ಆಗಾಗ ಹಿಂದುಗಳ ಮೇಲೆ ಇಂತಹ ಅತ್ಯಾಚಾರಗಳು ನಡೆದಿವೆ. ಆಗ ಆಗಿನ ಹಿಂದೂಗಳೂ ಸಂಘಟಿತರಾಗಿ ಐಕ್ಯಮತ್ಯದಿಂದ ಎದರಿಸಿ ಆತ್ಮ ರಕ್ಷಣೆ ಮಾಡಿಕೊಂಡಿದ್ದಾರೆ. ಅದರಂತೆ ಈಗಲೂ ಹಿಂದೂಗಳು ಶೂರರೂ ವೀರರೂ ಆಗಿ ಒಗ್ಗಟ್ಟಿನಿಂದ ಧೈರ್ಯವನ್ನು ಎದುರಿಸಬೇಕು. ಇಂತಹ ಸಮಯದಲ್ಲಿ ಮೈಮರೆಯದೆ ಎಚ್ಚೆತ್ತು ಸ್ವಕರ್ತವ್ಯ ತತ್ಪರರಾಗಬೇಕಾದುದು ಹಿಂದೂಗಳ ಪರಮ ಕರ್ತವ್ಯವಾಗಿದೆ.

ಭಗವಂತನು ಎಲ್ಲರಿಗೂ ಸದ್ಬುದ್ಧಿಯನ್ನಿತ್ತು ಜಗತ್ತಿಗೆ ಸಹಾ ಶಾಂತಿಯನ್ನೀಯಲಿ !

ಸ ತ್ಯ ವಾ ದಿ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚಸೇರಿ 1-12-0

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

For Good Printing

L. N. Press

Sriramp.t, MYSORE

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

At Ranjit

3rd Houseful Week

Anmol Ghadi

ನೂರ್‌ಜಹಾನ್ — ಸುರೇಂದ್ರ

ಜಹರ್ ರಾಜಾ — ಸುರಿಯ

ಪಾತ್ಯವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಆಫೀಸಿನಿಂದಾ

ನೋಟಿಫಿಕೇಷನ್

1946 ನೇ ಸೆಪ್ಟಂಬರ್ 30 ನೇ ತಾರೀಖು ಸೋಮವಾರ ಮಧ್ಯಾಹ್ನ 4 ಗಂಟೆವರೆವಿಗೆ ಈ ಕೆಳಗೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿರತಕ್ಕ ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ.

1 ಮೈಸೂರು ತಾಲ್ಲೂಕು ಬಾರ್‌ಲೈನ ರಸ್ತೆಯ ಎರಡನೇ ಮೈಲಿಯಲ್ಲಿ ಒಂದು ಟನಲ್ ಕಟ್ಟುವುದು.

2. ಪಿರಿಯಾಪಟ್ಟಣದ ತಾಲ್ಲೂಕು ಹಲಗನ ಹಳ್ಳಿ ಸಂತೆ ಮೈದಾನದಲ್ಲಿ ಒಂದು ಭಾವಿಯನ್ನು ತೋಡುವುದು.

ಟೆಂಡರನ್ನು ಸೀಲು ಮಾಡಿದ ಕವರಿನಲ್ಲಿಟ್ಟು ಮೇಲುಗಡೆಯಲ್ಲಿ ಮೇಲೆ ನಮೂದು ಮಾಡಿರುವ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಎಂದು ಅಡ್ರೆಸ್ಸು ಬರೆದು ಕಳುಹಿಸತಕ್ಕದ್ದು.

ಠೇವಣಿಗಾಗಿ ಪ್ರತಿಯೊಂದು ಕೆಲಸಕ್ಕೂ 50 ರೂಪಾಯಿಗಳನ್ನು ಖಜಾನೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಚಲನ್ನನ್ನು ಟೆಂಡರ ಜೊತೆಯಲ್ಲಿ ಹಾಜರು ಮಾಡಬೇಕು.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಆಫೀಸು ದಿನಗಳಲ್ಲಿ ಮಧ್ಯಾಹ್ನ 12 ರಿಂದ ಸಾಯಂಕಾಲ 5 ಗಂಟೆವರೆವಿಗೆ ಇಚ್ಛವುಳ್ಳ ಕಂಟ್ರಾಕ್ಟರುಗಳು ತಿಳಿಯಬಹುದು.

ಯಾವ ಟೆಂಡರನ್ನು ಆಖೈರಾಗಿ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರ ಅಧಿಕಾರಕ್ಕೆ ಒಳಪಟ್ಟಿರುತ್ತೆ. ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರುಗಳಿಗೆ ಕಾರಣವನ್ನು ಸಹ ಸೂಚಿಸಲಾಗುವುದಿಲ್ಲ.

ಕೆ. ಸಿ. ಸುಬ್ಬಣ್ಣ

ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು ಮೈಸೂರು.

At Opera 2 nd Week

MYSON

* ಬೇಬಿ ಕಮಲ * ಯು. ಆರ್. ಜೀವರತ್ನಂ ನಟಿಸಿರುವ

ನನ್ನ ಮಗ

ತಮಿಳು)

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.